6. ಗಮನ ಸೆಳೆಯುವ ಸೂಚನೆಗಳು :

ವಿಷಯ:– ಅರೆಕಾಲಿಕ ಉಪನ್ಯಾಸಕರನ್ನು ಖಾಯಂಗೊಳಿಸುವ ಬಗ್ಗೆ.

ಶ್ರೀ ವೀರಬಸವಂತ ರೆಡ್ಡಿ ಮುದ್ನಾಳ್ (ಯಾದಗೀರ್): ತಾತ್ಕಾಲಿಕ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವವರನ್ನು ನಿಗದಿತ ಸಮಯದೊಳಗೆ ಖಾಯಂ ಗೊಳಿಸುವ ಬಗ್ಗೆ ಮಾನ್ಯ ಉನ್ನತ ಶಿಕ್ಷಣ ಸಚಿವರ ಗಮನವನ್ನು ಸೆಳೆಯುತ್ತೇನೆ. ಅರೆಕಾಲಿಕ ಉಪನ್ಯಾಸಕರನ್ನು 1984–85ರಲ್ಲಿ ಖಾಯಂಗೊಳಿಸಲು ರಾಜ್ಯ ಸರ್ಕಾರವನ್ನು ಕೇಳಿದ್ದರು. 1997ರಲ್ಲಿ ರಾಜ್ಯ ಸರ್ಕಾರ ಈ ಉಪನ್ಯಾಸಕರನ್ನು ಖಾಯಂಗೊಳಿಸಲಿಕ್ಕೆ ಹಾಗೂ ಮಾನವೀಯತೆ ದೃಷ್ಟಿಯಿಂದ ಸುಪ್ರೀಂ ಕೋರ್ಟ್ ಆರ್ಡರ್ ಪ್ರಕಾರ, ಅವರನ್ನು ಖಾಯಂಗೊಳಿಸಲಾಗಿತ್ತು. ಆ ಆರ್ಡರ್‌ನಲ್ಲಿ ಮೂರು ವರ್ಷಗಳೊಳಗೆ ಒಂದು ಎನ್.ಇ.ಟಿ. (ನ್ಯಾಷನಲ್ ಎಲಿಜಬಿಲಿಟಿ ಟೆಸ್ಟ್) ಅನ್ನು ಇವರು ಯಾರು ಯಾರು ಪಾಸ್ ಆಗುತ್ತಾರೆಯೋ ಅವರಿಗೆ ನಾವು ಕಂಟಿನ್ಯೂ ಮಾಡಬೇಕು, ಯಾರು ಎನ್.ಇ.ಟಿ. ಪಾಶ್ ಆಗುವುದಿಲ್ಲ ಅವರಿಗೆ ತೆಗೆಯಬೇಕೆಂದು ರೂಲ್ ಹಾಕ್ಕಿದ್ದರು, ಆ ಒಂದು ರೂಲ್ ಪ್ರಕಾರ, ಈ ಜುಲೈನಲ್ಲಿ ಆ ಒಂದು ಸಮಯ ಮುಗಿಯುತ್ತದೆ. ಈಗ ಅವರನ್ನು ತೆಗೆಯಬಹುದು ಎಂಬ ಸಂಶಯ ಬರುತ್ತಿದೆ. ಅದಕ್ಕಾಗಿ ತಮ್ಮಲ್ಲಿ ವಿನಂತಿ ಇಷ್ಟೆ, ಯು.ಜಿ.ಸಿ. ಸ್ಕೇಲ್‌ನಿಂದ ಎನ್‌ಇಟಿ ಪಾಸ್ ಆಗಬೇಕೆಂದು ಹೇಳಿದ್ದರು. ಸ್ಟೇಟ್ ಸ್ಕೀಂನಿಂದ ಇವರಿಗೆ... ..

(ಸದನದಲ್ಲಿಂದ ಬಾವಿಯಲ್ಲಿದ್ದ ಸದಸ್ಯರುಗಳು ಮಾತನಾಡುತ್ತಿದ್ದರು).....

Mr. Speaker:- See, Mr. Kinekar if you did not raise this subject, I will allow you tomorrow. I will allow you tomorrow. You please speak in English. You please go to your seat. I will allow you to raise this subject tomorrow. Go to your seat. No no. There is no translator here. You please understand.

Sri J.C. Madhuswamy :- He cannot put a condition here.

Mr. Speaker: No, no.. There is no translator here. You please understand. You can't speak in Marathi. You can only speak in English.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಷರತ್ತು ಹಾಕಬಾರದು.

(ಗೊಂದಲ)

ಅಧ್ಯಕ್ಷರು: ನೀವು ಕುಳಿತುಕೊಳ್ಳಿ, ವೀರ ಬಸವಂತರೆಡ್ಡಿಯವರು ಮಾತನಾಡಿ.

(ಗೊಂದಲ)

ಶ್ರೀ ವೀರಬಸವಂತರೆಡ್ಡಿ ಮುದ್ನಾಳ್ : ನನ್ನ ವಿನಂತಿ ಇಷ್ಟೆ, ರಾಜ್ಯ ಸರ್ಕಾರ...

(ಸದನದ ಬಾವಿಯಲ್ಲಿದ್ದ ಸದಸ್ಯರುಗಳು ಮಾತನಾಡುತ್ತಿದ್ದರು)

ಅಧ್ಯಕ್ಷರು: ದಯಮಾಡಿ ಸುಮ್ಮನೆ ತಿಂತುಕೊಳ್ಳಿ, ವೀರ ಬಸವಂತರೆಡ್ಡಿಯವರೆ .....

(ಗೊಂದಲ)

ಅಧ್ಯಕ್ಷರು: ನೀವು ವೆಲ್‌ಗೆ ಬಂದಿದ್ದೀರಿ. ಈ ಸಭೆ ಕಾರ್ಯಕಲಾಪಕ್ಕೆ ಅಡ್ಡಿ ಮಾಡದೆ, ಸುಮ್ಮನೆ ಕುಳಿತುಕೊಳ್ಳಿ ಅಥವಾ ನಿಂತಿರಿ.

(ಸದನದ ಬಾವಿಯಲ್ಲಿದ್ದ ಸದಸ್ಯರುಗಳು ಮಾತನಾಡುತ್ತಿದ್ದರು)

ಅಧ್ಯಕ್ಷರು: ಕೇಳ್ರೀ ಇಲ್ಲಿ, ನೀವೇನು ನಿಮ್ಮ ಸಬ್ಜೆಕ್ಟ್ ಅನ್ನು ಎತ್ತಿ ಮಾತನಾಡುವುದಕ್ಕೆ ಅವಕಾಶವಾಗಿಲ್ಲವೆಂದು ಹೇಳಿದ್ದೀರಿ. ನಾನು ನಾಳೆ ಕೊಡುತ್ತೇನೆ. ದಯಮಾಡಿ ನೀವು ನಿಮ್ಮ ಸಿಟಿಗೆ ಹೋಗಿ.

ಶ್ರೀ ಡಿ. ಮಂಜುನಾಥ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೇ, Let us see tomorrow.

(ಸದನದ ಬಾವಿಯಲ್ಲಿದ್ದ ಸದಸ್ಯರುಗಳು ಮಾತನಾಡುತ್ತಿದ್ದರು)

ಅಧ್ಯಕ್ಷರು: ಆಯಿತು, ಸುಮ್ಮನೆ ನಿಲ್ಲಿ.

ಶ್ರೀ ಡಿ. ಮಂಜುನಾಥ್: ಸರ್ಕಾರಿ ಪದವಿ ಕಾಲೇಜುಗಳಲ್ಲಿ 1993–94 ಮತ್ತು 1994–95ರಲ್ಲಿ ಮತ್ತು 1992–93 ಅಥವಾ 1994–95 ನೇ ಸಾಲಿನಲ್ಲಿ ಕಾರ್ಯನಿರ್ವಹಿಸಿರುವ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ಸೇವೆಯನ್ನು ಕಾಲೇಜು ಶಿಕ್ಷಣ ಇಲಾಖೆ...

(ಈ ಹಂತದಲ್ಲಿ ಜೆ.ಸಿ.ಮಾಧುಸ್ವಾಮಿಯವರು ತಮ್ಮ ಸ್ಥಾನದಲ್ಲಿ ಕುಳಿತುಕೊಂಡು ಕಾಪಿ ಕೊಟ್ಟಿಲ್ಲವೆಂದು ಹೇಳಿದರು)

ಶ್ರೀ ಡಿ. ಮಂಜುನಾಥ್: ಕಾಪಿ ಕೊಟ್ಟಿದ್ದಾರೆ. ಕಾಪಿ ಕಳುಹಿಸಿದ್ದೇವೆ.

ಅಧ್ಯಕ್ಷರು: ಕಾಪಿ ಹೋಗಿಲ್ಲವೇ, ನೋಡಿ, ಏನು ಕೆಲಸ ಮಾಡ್ತೀರಿ ನೀವೆಲ್ಲಾ, ಆಯಿತು, ಕಳುಹಿಸುತ್ತಾರೆ. ಮಾನ್ಯ ಮಂತ್ರಿಗಳೇ ಹೇಳಿ,

ಶ್ರೀ ಡಿ. ಮಂಜುನಾಥ್ : ಕಳುಹಿಸಿದ್ದೇವೆ.

(ಸದನದ ಬಾವಿಯಲ್ಲಿದ್ದ ಸದಸ್ಯರುಗಳು ಮಾತನಾಡುತ್ತಿದ್ದರು)

ಅಧ್ಯಕ್ಷರು: ದಯಮಾಡಿ ನೀವು ಸುಮ್ಮನೆ ನಿಂತುಕೊಳ್ಳಬೇಕು, ಬೇರೆ ಸಬ್ಜೆಕ್ಟ್ ತೆಗೆದುಕೊಂಡಿದ್ದೇನೆ. ಪದೇ ಪದೇ ನೀವು ಈ ತರಹ ಮಾತನಾಡಕೂಡದು, ದಯಮಾಡಿ, ನಿಂತುಕೊಳ್ಳಿ, ಉನ್ನತ ಶಿಕ್ಷಣ ಸಚಿವರೆ ಮಾತನಾಡಿ. ನೀವು ನಿಮ್ಮ ಸ್ಥಳಕ್ಕೆ ಹೋಗಿ, ನಾಳೆ ವಿಷಯ ಎತ್ತಿ.

(ಈ ಹಂತದಲ್ಲಿ ಸದನದ ಬಾವಿಯಲ್ಲಿದ್ದ ಮಾನ್ಯ ಸದಸ್ಯರುಗಳಾದ ಶ್ರೀ ಮನೋಹರ ಕಲ್ಲಪ್ಪ ಕಿನೇಕರ್ ಮತ್ತು ಶ್ರೀ ದಿಗಂಬರ್ ಯಶವಂತರಾವ್ ಪಾಟೀಲ್‌ರವರು ತಮ್ಮ ಸ್ಥಾನಕ್ಕೆ ತೆರಳಿದರು)

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು): ಸನ್ಮಾನ್ಯ ಅಧ್ಯಕ್ಷರೇ, ನಾನು ಈ ಕೆಳಕಂಡ ಹೇಳಿಕೆಯನ್ನು ಮಾಡುತ್ತೇನೆ.

ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿನ ಸರ್ಕಾರಿ ಪದವಿ ಕಾಲೇಜುಗಳಲ್ಲಿ 1993–94 ಮತ್ತು 94–95ರಲ್ಲಿ ಕಾರ್ಯನಿರ್ವಹಿಸಿರುವ ಸಾಮಾನ್ಯ ಅಭ್ಯರ್ಥಿಗಳು ಮತ್ತು 1993–94 ಅಥವಾ 94–95ನೇ ಸಾಲಿನಲ್ಲಿ ಕಾರ್ಯನಿರ್ವಹಿಸಿರುವ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ಸೇವೆಯನ್ನು ಕಾಲೇಜು ಶಿಕ್ಷಣ ಇಲಾಖೆ ಸೇವೆಯಲ್ಲಿ ವಿಲೀನಗೊಳಿಸಲು ಸರ್ಕಾರಿ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 48 ಎಸ್.ಆರ್.ಇ. 96 ದಿನಾಂಕ:22–01–1997ರಲ್ಲಿ ನಿಯಮಗಳನ್ನು ರಚಿಸಿದ್ದು, ಇದಕ್ಕೆ ಆಗಿಂದಾಗ್ಗೆ ತಿದ್ದುಪಡಿ ಮಾಡಲ್ಪಟ್ಟಿದೆ. ಭಾರತದ ಸರ್ವೋಚ್ಚ ನ್ಯಾಯಾಲಯವು ಎಸ್.ಎಲ್.ಪಿ. (ಸಿವಿಲ್) ಸಂಖ್ಯೆ:15991/99ಕ್ಕೆ ಸಂಬಂಧಿಸಿದಂತೆ ಸಿವಿಲ್ ಅಫಿಲ್ ಸಂಖ್ಯೆ:27/2001ರ ಮೇಲೆ ದಿನಾಂಕ:04–01–2001ರಂದು ನೀಡಿದ ತೀರ್ಪಿನನ್ವಯ ಸರ್ಕಾರಿ ಅಧಿಸೂಚನೆ ಸಂಖ್ಯೆ:ಡಿ.ಪಿ.ಎ.ಆರ್.55 ಎಸ್.ಆರ್.ಇ 2001 ದಿನಾಂಕ:09–07–2002ರಲ್ಲಿ ಮೇಲ್ತಿಳಿಸಿದ ಸೇವಾ ವಿಲೀನತೆ ನಿಯಮಗಳಿಗೆ ತದ್ದುಪಡಿ ನಿಯಮಗಳನ್ನು ಹೊರಡಿಸಲಾಗಿದ್ದು, ಇದರನ್ವಯ ಎನ್.ಇ.ಟಿ.:ಎಸ್.ಎಲ್.ಇ.ಟಿ. ಪರೀಕ್ಷೆಯನ್ನು ಪಾಸು

ಮಾಡದವರು ಸದರಿ ತಿದ್ದುಪಡಿ ನಿಯಮಗಳು ಹೊರಡಿಸಲ್ಪಟ್ಟ ದಿನಾಂಕದಿಂದ 3 ವರ್ಷಗಳೊಳಗೆ ಅಂದರೆ ದಿನಾಂಕ:09–07–2005 ರೋಳಗೆ ಎನ್.ಇ.ಟಿ.: ಎಸ್.ಎಲ್.ಇ.ಟಿ. ಪಾಸು ಮಾಡಬೇಕಾಗಿದೆ.

ಮೇಲ್ತಿಳಿಸಿದ ನಿಯಮಾವಳಿಗಳಲ್ಲಿನ ಅವಕಾಶಗಳನ್ವಯ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ 1130 ಅರೆಕಾಲಿಕ ಉಪನ್ಯಾಸಕರ ಪೈಕಿ 535 ಅರೆಕಾಲಿಕ ಉಪನ್ಯಾಸಕರ ಸೇವೆಯನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ದಿನಾಂಕ:26–05–2003 ರಿಂದ 25–09–2004ರ ಅವಧಿಯಲ್ಲಿ ಇವರುಗಳು ಎನ್.ಇ.ಟಿ.: ಎಸ್.ಎಲ್.ಇ.ಟಿ. ಯನ್ನು ದಿನಾಂಕ:09–07–2005ರೊಳಗೆ ಪಾಸು ಮಾಡಬೇಕೆಂತಲೂ, ಇಲ್ಲದಿದ್ದಲ್ಲಿ ಇವರನ್ನು ಸೇವೆಯಿಂದ ತೆಗೆದುಹಾಕಲಾಗುವುದೆಂದು ಷರತ್ತನ್ನು ವಿಧಿಸಿ ಸೇವಾ ವಿಲೀನತೆಗೊಳಿಸಲಾಗಿದೆ, ಇದರಂತೆ ಸೇವಾ ವಿಲೀನತೆಗೊಂಡ ಎಲ್ಲಾ ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗುವ ಪೂರ್ವದಲ್ಲಿ ಈ ಷರತ್ತಿಗೆ ಒಪ್ಪಿ ಮುಚ್ಚಳಿಕೆ ಪತ್ರ ಬರೆದುಕೊಟ್ಟಿರುತ್ತಾರೆ. ನೇಮಕಾತಿ ಆದೇಶದಲ್ಲಿ ನಿಗದಿಪಡಿಸಿದ ಅವಧಿ ದಿನಾಂಕ: 09–07–2005ಕ್ಕೆ ಮುಗಿದಿರುತ್ತದೆ. ಸೇವಾ ವಿಲೀನತೆಗೊಂಡ ಅರೆಕಾಲಿಕ ಉಪನ್ಯಾಸಕರ ಪೈಕಿ 88 ಅಭ್ಯರ್ಥಿಗಳು ಎನ್.ಇ.ಟಿ. : ಎಸ್.ಎಲ್.ಇ.ಟಿ. ಪಾಸು ಮಾಡಿರುತ್ತಾರೆ.

ಸರ್ವೋಚ್ಚ ನ್ಯಾಯಾಲಯದ ತೀರ್ಪಿನಲ್ಲಿ ಸೇವಾ ಸಕ್ರಮಕೊಂಡ ಅರೆಕಾಲಿಕ ಉಪನ್ಯಾಸಕರು 3 ವರ್ಷಗಳೊಳಗೆ ಎನ್.ಇ.ಟಿ. : ಎಸ್.ಎಲ್.ಇ.ಟಿ. ತೇರ್ಗಡೆಯಾಗದಿದ್ದಲ್ಲಿ ಅವರನ್ನು ಸೇವೆಯಿಂದ ವಜಾಗೊಳಿಸಲು ಸ್ಪಷ್ಟ ನಿರ್ದೇಶನವಿದೆ. ಎನ್.ಇ.ಟಿ. :ಎಸ್.ಎಲ್.ಇ.ಟಿ. ಪಾಸು ಮಾಡದವರನ್ನು ರಾಜ್ಯ ವೇತನ ಶ್ರೇಣಿಯಲ್ಲಿ ಮುಂದುವರೆಸಲು ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ ಅವಕಾಶವಿರುವುದಿಲ್ಲ, ಆದ್ದರಿಂದ ತೀರ್ಪಿನಂತೆ ಕ್ರಮ ಕೈಗೊಳ್ಳಬೇಕಾಗುತ್ತದೆ. ಭಾರತದ ಸರ್ವೋಚ್ಚ ನ್ಯಾಯಾಲಯದ ತೀರ್ಪು ಮತ್ತು ಇದರನ್ವಯ ಹೊರಡಿಸಲ್ಪಟ್ಟ ತಿದ್ದುಪಡಿ ನಿಯಮಗಳನ್ವಯ ಅರ್ಹತಾ ಪರೀಕ್ಷೆ ಪಾಸು ಮಾಡುವಿಕೆಯಿಂದ ವಿನಾಯಿತಿ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀಮತಿ ಎಂ.ಕೆ. ಸುಜಾತ ಮತ್ತು ಇತರರು ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಮಧ್ಯಂತರ ಅರ್ಜಿ ಸಂಖ್ಯೆ:43–62–2005

ನ್ಯಾಯಾಲಯದ ಮುಂದೆ ದಿನಾಂಕ 10–07–2005ರಂದು ವಿಚಾರಣೆಗೆ ಬರುತ್ತಿದ್ದುದರ ಹಿನ್ನಲೆಯಲ್ಲಿ ಇವರುಗಳ ಸೇವೆಯನ್ನು ವಜಾಗೊಳಿಸದೆ ದಿನಾಂಕ: 11–07–2005ರಂದು ನ್ಯಾಯಾಲಯದಲ್ಲಿನ ಬೆಳವಣಿಗೆಗಳನ್ನು ಕಾಯಲಾಗಿತ್ತು. ನವದೆಹಲಿಯಲ್ಲಿನ ಕಾನೂನು ಕೋಶದ ಅಧೀನ ಕಾರ್ಯದರ್ಶಿಯವರು ಸದರಿ ಪ್ರಕರಣವು ದಿನಾಂಕ: 11–07–2005ರಂದು ಸರ್ವೋಚ್ಚ ನ್ಯಾಯಾಲಯದ ಮುಂದೆ ವಿಚಾರಣೆಗೆ ಬಂದು ಹಿಂತೆಗೆದುಕೊಂಡಂತೆ ವಜಾಗೊಳಿಸಲ್ಪಟ್ಟಿದೆ ಎಂದು ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ತೆಗೆದುಕೊಳ್ಳಬೇಕಾದ ಮುಂದಿನ ಕ್ರಮದ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ.

ಶ್ರೀ ವೀರ ಬಸವಂತರೆಡ್ಡಿ ಮುದ್ನಾಳ್ : ಮಾನ್ಯ ಅಧ್ಯಕ್ಷರೆ, ಕೋರ್ಟಿನ ತೀರ್ಪು ಒಂದು ಕಡೆ ಆದರೆ ಈ ಉಪನ್ಯಾಸಕರ ವಯಸ್ಸು ಸುಮಾರು 40ರಿಂದ 45 ಇದೆ, ಇವರಿಗೆ ಬೇರೆ ಯಾವ ಜಾಬ್ ಸಿಗುವ ಅವಕಾಶವೇ ಇಲ್ಲ, ಅದಕ್ಕಾಗಿ ಸರ್ಕಾರ ಮಾನವೀಯತೆಯ ಮೇಲೆ ತಾವು ಯಾವ ಅಧಾರದ ಮೇಲೆ ಮಾಡುತ್ತೀರೋ ಇವರಿಗೆ ಅನುಕೂಲ ಮಾಡಿಕೊಟ್ಟರೆ ಇವರ ಸುಮಾರು 500 ಕುಟುಂಬಗಳು ಬದುಕುತ್ತವೆ. ಇವರನ್ನು ತೆಗೆದು ಹಾಕಿದರೆ ಮುಂದೆ ಎಲ್ಲಿಯೂ ಇವರಿಗೂ ಅವಕಾಶವೇ ಇಲ್ಲ. They have crossed the age for employment anywhere. ಅದಕ್ಕಾಗಿ ತಾವು ಯಾವುದಾದರು ಒಂದು ತೀರ್ಮಾನ ತೆಗೆದುಕೊಂಡು ಅನುಕಂಪದ ಮೇಲೆ ಅವರನ್ನು ಅಲ್ಲಿಯೇ ಕಂಟಿನ್ಯೂ ಮಾಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಸುಪ್ರೀಂಕೋರ್ಟಿನ ಆದೇಶದ ಪ್ರಕಾರ ಇವತ್ತಿನ ದಿವಸ ಅವರನ್ನು ಕಂಟಿನ್ಯೂ ಮಾಡುವುದಕ್ಕೆ ಬರುವುದಿಲ್ಲ, ಅವರು ಮಾನವೀಯ ದೃಷ್ಟಿಯಿಂದ ಮಾಡಿ ಎಂದು ಹೇಳಿದ್ದಾರೆ, ಈ ಮಾನವೀಯತೆಯ ದೃಷ್ಟಿಯಿಂದ ನಾವು ಏನು ಮಾಡಬಹುದು ಎಂಬುದರ ಬಗ್ಗೆ ಯೋಚನೆ ಮಾಡುತ್ತೇವೆ, ಯೋಚನೆ ಮಾಡೋಣ.

ಅಧ್ಯಕ್ಷರು: ಆಯಿತು, ಮಾನ್ಯ ಯಡಿಯೂರಪ್ಪನವರೇ, ಭೀಮಾ ನದಿಯ ಬಗ್ಗೆ ತಾವು ಕೇಳಿ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ಅದರ ಬಗ್ಗೆ ಚರ್ಚೆ ಮಾಡಬೇಕಾಗಿದೆ, ಏಕೆಂದರೆ ವಯೋಮಿತಿ ಮೀರಿ ಹೋಗಿದೆ, 10–15 ವರ್ಷ ಕೆಲಸ ಮಾಡಿಸಿಕೊಂಡು ಈಗ ಅವರನ್ನು ಕೈಬಿಟ್ಟರೆ ಹೇಗೆ?

ಶ್ರೀ ಜೆ.ಸಿ. ಮಾಧುಸ್ವಾಮಿ: ಇಲ್ಲಿ 500 ಹುಡುಗರ ಭವಿಷ್ಯ ಏನಾಗಬೇಕು? ನಾವು ಇದರಲ್ಲಿ ಮಧ್ಯ ಬರುವುದಿಲ್ಲ, ಮಧ್ಯೆ ಬರಬಾರದು..

ಅಧ್ಯಕ್ಷರು: ನೀವು ಬೇಕಾದರೆ ಬೇರೆ ನಿಯಮದಡಿ ಸೂಚನೆ ಕೊಡಿ. ನಂತರ ನಾನು ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ತಮಗೆ ಕನ್ವಿನ್ಸ್ ಮಾಡುತ್ತೇನೆ ತಾವು ಕೇಳಬೇಕು.

ಅಧ್ಯಕ್ಷರು: ಗಮನ ಸೆಳೆಯುವ ಸೂಚನೆಯಲ್ಲಿ ಒಂದು ಎರಡು ಕ್ಲಾರಿಫಿಕೇಷನ್ ಕೇಳಾಯಿತು.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ಸಾರ್ ನಾವು ಇದರಲ್ಲಿ ಅಡ್ಡ ಬರುತ್ತಿಲ್ಲ.

Mr. Speaker: I will allow for discussion. ಆದುದರಿಂದ ಬೇರೆ ನಿಯಮದಡಿ ಕೊಡಿ ನೋಡೋಣ.

ಶ್ರೀ ಜೆ ಸಿ. ಮಾಧುಸ್ವಾಮಿ: ಅಷ್ಟು ಲೈಟಾಗಿ ಮುಗಿಸಿಬಿಟ್ಟರೆ ಹೇಗೆ.

ಶ್ರೀ ಬಿ.ವಿ. ಶ್ರೀರಾಮರೆಡ್ಡಿ: ನಾವು ಅಡ್ಡ ಬರುತ್ತಿಲ್ಲ. ವಿಷಯ ಬಾರಿ ಗಂಭೀರತೆ ಇದೆ. ಬೇರೆ ರೂಪದಲ್ಲಿ ಆದರೂ ಅವಕಾಶ ಮಾಡಿಕೊಡಿ.

ಶ್ರೀ ಜೆ ಸಿ. ಮಾಧುಸ್ವಾಮಿ: ಶಾಸನ ಸಭೆಯಲ್ಲಿ ಪ್ರಸ್ತಾಪ ಮಾಡಿ ಇಷ್ಟು ಬೇಗ ಅದು ಕ್ಲೋಸ್ ಆಗಿ ಬಿಟ್ಟರೆ ಹೇಗೆ?

ಅಧ್ಯಕ್ಷರು: ಅದನ್ನು ನಾನು ಅರ್ಥ ಮಾಡಿಕೊಳ್ಳುತ್ತೇನೆ, ನಾನೂ ಕೂಡ ಒಪ್ಪುತ್ತೇನೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ಬೇರೆ ಯಾವುದಾದರೂ ರೂಪದಲ್ಲಿ ಚರ್ಚೆಗೆ ಅವಕಾಶ ಕೊಡಿ.

ಅಧ್ಯಕ್ಷರು: ಈಗ ಅವರು ಒಂದು ಸಭೆ ಕರೆದು ತೀರ್ಮಾನಿಸೋಣ ಎಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರಲ್ಲಾ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇಲ್ಲ ಹಾಗೆ ಹೇಳಿಲಿಲ್ಲ. ಅದು ಏನಾಗಿದೆ ಎಂದರೆ ಎನ್.ಇ.ಟಿ. ಆಗಿಲ್ಲವೆಂದು ಅವರನ್ನು ಫಸ್ಟ್ ಗ್ರೇಡ್ ಕಾಲೇಜುಗಳಿಗೆ ಲೋಕಲ್ ಕ್ಯಾಂಡಿಡೇಟ್ ಆಗಿದ್ದವರನ್ನು ರೆಕ್ರೂಟ್ ಮಾಡಲಿಕ್ಕೆ ಯುಜಿಸಿ

ಯವರು ಅಬ್ಜೆಕ್ಟ್ ಮಾಡಿ ನಿಂತು ಬಿಟ್ಟಿದ್ದಾರೆ. ಇವರು ಒಂದು ತೀರ್ಮಾನ ಮಾಡಿದರು. ಎನ್.ಇ.ಟಿ. ಆಗದವರನ್ನು ನಾವು ಜೂನಿಯರ್ ಕಾಲೇಜುಗಳಿಗೆ ಅಕಾಮಡೇಟ್ ಮಾಡುತ್ತೇವೆಂದರು. ಜೂನಿಯರ್ ಕಾಲೇಜಿಗೂ ಅವರು ಬರುವ ಹಾಗೆ ಇಲ್ಲ, ಫಸ್ಟ್ ಗ್ರೇಡ್ ಕಾಲೇಜಿಗೂ ಅವರು ಹೋಗುವ ಹಾಗೆ ಇಲ್ಲ, 10,12,18, ವರ್ಷ ಕೆಲಸ ಮಾಡುತ್ತಿರುವ ಮೇಷ್ಟ್ರುಗಳನ್ನು ಏಕಾಏಕಿ ಮನೆಗೆ ಕಳುಹಿಸುವ ನಿರ್ಧಾರ ಮಾಡಿ ಬಿಟ್ಟರೆ ಏನು ಗತಿ? ಇದಕ್ಕೆ ಏನಾದರೂ ಒಂದು ರೆಮಿಡಿ ಕಂಡು ಹಿಡಿಯಬೇಕು ಅಲ್ಲವೆ? ಇವರು ಯಾರ್ಯಾರಿಗೆ ಎನ್.ಇ.ಟಿ. ಇಲ್ಲ ಅವರನ್ನು ಜೂನಿಯರ್ ಕಾಲೇಜುಗಳಲ್ಲಿ ಅಕಾಮಡೇಟ್ ಮಾಡುತ್ತೇವೆ ಎನ್ನುವ ನಿಲುವನ್ನು ತೆಗೆದುಕೊಂಡಿದ್ದರು.

ಅಧ್ಯಕ್ಷರು: ಅದು ಸರಿ ತಾವು ಹೇಳಿದ ಹಾಗೆ ಮಾನವೀಯತೆ ಹೌದು, ಆದರೆ ಅವರು ಎನ್.ಇ.ಟಿ.ಯನ್ನೇ ಪಾಸ್ ಮಾಡಲಿಲ್ಲ. 15 ವರ್ಷವಾಯಿತು ಎಂದರೆ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ಅವರನ್ನು ಜೂನಿಯರ್ ಕಾಲೇಜುಗಳಿಗೆ ಕೊಡಬಹುದು, ಜೂನಿಯರ್ ಕಾಲೇಜ್ ಇವರದೇ ಆಡಳಿತ-ಅಲ್ಲಿಗೆ ಯಾವ ಗ್ರ್ಯಾಂಟ್ ಕಮೀಷನ್ ಇಲ್ಲ.

Mr.Speaker: I Agree. What is the drawback? ಎನ್.ಇ.ಟಿ. ಅಷ್ಟೊಂದು ದೊಡ್ಡ ಪರೀಕ್ಷೆಯೇ? ಏಕೆ ಪಾಸ್ ಮಾಡಲಿಕ್ಕೆ ಆಗುತ್ತಿಲ್ಲ? ಏನು?

ಶ್ರೀ ಬಿ.ಎಸ್. ಯಡಿಯೂರಪ್ಪ: ಹಾಗಾದರೆ ಅವರನ್ನು ನೇಣುಗಂಬಕ್ಕೆ ಏರಿಸಬೇಕು ಸಾರ್, ಅವರಿಗೆ ವಿಷ ಕೊಟ್ಟು ಸಾಯಿಸಬೇಕು, ಇಷ್ಟು ವರ್ಷ ಸರ್ವೀಸ್ ಮಾಡಿ ನೀವು ಅವರಿಗೆ ಪಿ.ಯು.ಸಿ. ಯಲ್ಲಿ ಪಾಠ ಮಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಪಿಯುಸಿ ನಲ್ಲಿ ಸುಮಾರು 800 ಪೋಸ್ಟ್‌ಗಳು ಖಾಲಿ ಇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಿರುದ್ಯೋಗಿಗಳಿಗೆ ಉದ್ಯೋಗ ಕೊಡುವುದಕ್ಕೆ ಆಗುತ್ತಿಲ್ಲ ಇಂಥ ಸಂದರ್ಭದಲ್ಲಿ ಹೀಗೆ ಮಾಡಿದರೆ ಹೇಗೆ? ನೀವು ಕೂಡ ಆ ಕ್ಷೇತ್ರದಲ್ಲಿ ಕೆಲಸ ಮಾಡಿದಂಥವರು.

ಅಧ್ಯಕ್ಷರು : ದಯಮಾಡಿ ಕೇಳಿ, ಇದರಲ್ಲಿ ಅಡಕವಾಗಿರುವುದು ಏನೆಂದರೆ, ಮೂರು ವರ್ಷದೊಳಗೆ ಎನ್.ಇ.ಟಿ. ಪಾಸ್ ಮಾಡಬೇಕೆಂದು ಇದೆ, ಅವರು ಬಹಳ ಜನ ಪಾಸ್ ಮಾಡಿಲ್ಲ, ಆವರಿಗೆ ಆಸಕ್ತಿನೇ ಇಲ್ಲವೋ? ಅವರು ಪರೀಕ್ಷೆನೇ ತೆಗೆದುಕೊಂಡಿಲ್ಲವೋ ಅಥವಾ ಇನ್ನೇನ್ನಾದರೂ ತೊಂದರೆ ಇದೆಯೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ವಯಸ್ಸಿನಲ್ಲಿ ಅವರು ಪರೀಕ್ಷೆ ಎದುರಿಸಿ ಪಾಸ್ ಮಾಡುವ ಸ್ಥಿತಿಯಲ್ಲಿ ಇಲ್ಲ, ದಯಮಾಡಿ ಆ ರೀತಿ ಮಾಡಬೇಡಿ.

ಶ್ರೀ ಡಿ. ಮಂಜುನಾಥ್ : ಒಟ್ಟಿಗೆ 1133 ಜನ ಇದ್ದರು. ಅದರಲ್ಲಿ ನಾವು ಏನು ಮಾಡಿದೆವು ಎಂದರೆ, 55 ಪರ್ಸೆಂಟ್ ಮೇಲೆ ಇರುವವರನ್ನು ಫಸ್ಟ್ ಗ್ರೇಡ್ ಕಾಲೇಜ್‌ನಲ್ಲಿ 55 ಪರ್ಸೆಂಟ್‌ಗಿಂತ ಕಡಿಮೆ ಇರುವವರನ್ನು ಜೂನಿಯರ್ ಕಾಲೇಜಿಗೆ ಎಂದು ಮಾಡಿದ್ದೆವು. ಈಗ ಅವರು ಸೇಫ್ ಆಗಿದ್ದಾರೆ, ಅದರಲ್ಲಿ ಅರ್ಧ ಜನ ಹೋಗಿದ್ದಾರೆ, ಈ ಅರ್ಧ ಜನಕ್ಕೆ ಮಾತ್ರ ಈ ರೀತಿಯ ಅವಸ್ಥೆಯಾಗಿದೆ, ಅದಕ್ಕೋಸ್ಕರ ನಾನೇನು ಯೋಚನೆ ಮಾಡುತ್ತೇನೆಂದರೆ, ನಾಳೆಯ ದಿವಸ ಮಾನ್ಯ ರಾಮಲಿಂಗಾ ರೆಡ್ಡಿಯವರನ್ನು ಕರೆಸುತ್ತೇನೆ, ಅವರ ಅಧಿಕಾರಿಗಳನ್ನು ನಮ್ಮ ಅಧಿಕಾರಿಗಳನ್ನು ಕರೆಸುತ್ತೇನೆ, ಜೂನಿಯರ್ ಕಾಲೇಜುಗಳಲ್ಲಿ ಎಷ್ಟು ವೇಕೆನ್ಸಿ ಇದೆ ಅದನ್ನು ನೋಡೋಣ.

ಶ್ರೀ ಜೆ.ಸಿ. ಮಾಧುಸ್ವಾಮಿ: ಜೂನಿಯರ್ ಕಾಲೇಜುಗಳಲ್ಲಿ ಸುಮಾರು 800 ಹುದ್ದೆಗಳು ಖಾಲಿ ಇವೆ, ಅಲ್ಲಿಗೆ ಇವರನ್ನು ಕೊಡಲಿ,

ಶ್ರೀ ಡಿ. ಮಂಜುನಾಥ್: ಆಯಿತು ನಾನು ಹೇಳುತ್ತೇನೆ ಸ್ವಲ್ಪ ತಾಳಿ.

ಅಧ್ಯಕ್ಷರು : ಆಯಿತು ಮಾನ್ಯ ಮಾಧುಸ್ವಾಮಿಯವರೇ ಇಲ್ಲಿ ಕೇಳಿ, ಯಾವುದಾದರೂ ನಿಯಮದಡಿಯಲ್ಲಿ ಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನವೀಯತೆ ದೃಷ್ಟಿಯಿಂದ ಅವರನ್ನು ಎಲ್ಲಿಯಾದರೂ ಅಕಾಮಡೇಟ್ ಮಾಡಿ ಅವರನ್ನು ಉಳಿಸಿಕೊಳ್ಳಿ.

ಶ್ರೀ ಡಿ. ಮಂಜುನಾಥ್: ಆಯಿತು ಸ್ವಾಮಿ ಅದನ್ನೇ ನಾನು ಹೇಳುತ್ತಿರುವುದು, ಮಾನವೀಯತೆ ದೃಷ್ಟಿಯಿಂದಲೇ ಈಗ ಅವರಿಗೆ ಸಹಾಯ ಮಾಡಬೇಕು ಎನ್ನುವುದಾದರೆ ನಾಳೆಯ ದಿವಸ ಅವರನ್ನು ಕರೆದು ಇದರ ಬಗ್ಗೆ ಪರಿಹಾರ ಕಂಡು ಹಿಡಿಯಬೇಕಾಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇದು 500 ಕುಟುಂಬದ ಪ್ರಶ್ನೆ, ನಾಳೆಯ ದಿವಸ ಆ ಕುಟುಂಬಗಳು ಬೀದಿ ಪಾಲಾದರೆ ಅವರು ಏನು ಮಾಡಬೇಕು? ಅವರಿಗೆ ಮದುವೆಯಾಗಿದೆ, ಮಕ್ಕಳು ಆಗಿದೆ ಅವರು 10–15 ವರ್ಷಗಳಿಂದ ಅವರು ಮಾಡಿ, ಏನು ಮಾಡಬೇಕು?

ಶ್ರೀ ಆರಗ ಜ್ಞಾನೇಂದ್ರ : ಸರಕಾರಿ ಕಾಲೇಜುಗಳಿಗೆ, ಖಾಸಗಿ ಅನುದಾನಿತ ಕಾಲೇಜುಗಳಿಗೆ ಒಂದು ರೀತಿಯ ಕೆಟಗರಿಯನ್ನು ಫಿಕ್ಸ್ ಮಾಡಲಿಕ್ಕೆ ಯೋಚನೆ ಮಾಡುತ್ತಿದ್ದೀರಿ. ಸರ್ಕಾರಿ ಕಾಲೇಜುಗಳಿಗೆ ಇಡೀ ರಾಜ್ಯಕ್ಕೆ ಒಂದು ಯೂನಿಟ್ ಮಾಡಿದ್ದೀರಿ. ಮೀಸಲಾತಿಯನ್ನು ಸಬ್ಜೆಕ್ಟ್‌ವೈಸ್ ಮಾಡುತ್ತಿದ್ದೀರಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅದಕ್ಕೂ ಇದಕ್ಕೂ ಸಂಬಂಧವಿಲ್ಲ, ಈಗ ಜೂನಿಯರ್ ಕಾಲೇಜುಗಳಲ್ಲಿ 800 ಪೋಸ್ಟ್ ಖಾಲಿ ಇದೆ.

ಶ್ರೀ ಡಿ. ಮಂಜುನಾಥ್: ಅದನ್ನೇ ನಾನು ಹೇಳುತ್ತಿದ್ದೇನೆ, ನಾಳೆಯ ದಿವಸ ಸಂಬಂಧಪಟ್ಟ ಮಂತ್ರಿಗಳನ್ನು ಕರೆಸುತ್ತೇವೆ, ನಮ್ಮ ಹಾಗೂ ಅವರ ಅಧಿಕಾರಿಗಳನ್ನು ಕರೆಸಿ ಇವರಿಗೆ ಮಾನವೀಯತೆ ದೃಷ್ಟಿಯಿಂದ ಸಹಾಯ ಮಾಡಬೇಕು ಎನ್ನುವ ಮನಸ್ಸು ನನಗೆ ಬಂದಿದೆ, ಅದಕ್ಕಾಗಿ ನಾಳೆ ಒಂದು ಮೀಟಿಂಗ್ ಕರೆಸಿ ಮಾತನಾಡಿ ಅದು ಏನು ಸಾಧ್ಯವಿದೆಯೋ ಅವರಿಗೆ ಯಾವ ರೀತಿ ಸಹಾಯ ಮಾಡಬೇಕೋ ಅದನ್ನು ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು: ಸರ್ವ ಪಕ್ಷಗಳ ಸಭೆ ಕರೆದು ಅದರಲ್ಲಿ ನಿಮ್ಮ ಅಧಿಕಾರಿಗಳನ್ನು ಕರೆದು ಮಾತನಾಡಿ ಅದರ ಬಗ್ಗೆ ಸೆಟ್ಲ್ ಮಾಡಿ. ಮಾನ್ಯ ಯಡಿಯೂರಪ್ಪನವರೇ, ತಾವು ಕೇಳಿ.

ಅಧ್ಯಕ್ಷರು: ಆಯಿತು ದಯಮಾಡಿ ಕುಳಿತುಕೊಳ್ಳಿ. ಯಡಿಯೂರಪ್ಪನವರೇ ತಾವು ಮಾತನಾಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ : ನಾನು ಪ್ರಸ್ತಾಪ ಮಾಡುವುದಕ್ಕೆ ರೆಡಿ ಇದ್ದೇನೆ ಆದರೆ ನೀರಾವರಿ ಸಚಿವರು ಇಲ್ಲ. ಅರ್ಧಗಂಟೆಗಳ ಕಾಲಾವಧಿ ಚರ್ಚೆಗೆ ತೆಗೆದುಕೊಳ್ಳಿ ಅವರು ಬಂದ ಮೇಲೆ ಉತ್ತರ ಕೊಡಲಿ. ಇದು ಬಹಳ ಪ್ರಮುಖವಾದುದು. ನಾನು ರೆಡಿ ಇದ್ದೇನೆ, ನಾನು ಬಂದು ಇಲ್ಲಿ ಕುಳಿತ್ತಿದ್ದೇನೆ.

ಅಧ್ಯಕ್ಷರು : ಅರ್ಧಗಂಟೆಗಳ ಕಾಲ ಚರ್ಚೆಯನ್ನು ನಂತರ ತೆಗೆದುಕೊಳ್ಳೋಣ. ಈಗ ಡಿಮ್ಯಾಂಡ್ಸ್ ಮೇಲೆ ಮಾನ್ಯ ವಿಶ್ವೇಶ್ವರ ಹೆಗಡೆಯವರು ಚರ್ಚೆ ಪ್ರಾರಂಭಿಸಲಿ. ನೀರಾವರಿ ಮಂತ್ರಿಗಳು ಬಂದ ಮೇಲೆ ಅದನ್ನು ತೆಗೆದುಕೊಳ್ಳೋಣ.

ಶ್ರೀ ಬಿ ಎಸ್. ಯಡಿಯೂರಪ್ಪ : ಈಗ ಅರ್ಧಗಂಟೆಗಳ ಕಾಲ ಚರ್ಚೆಯನ್ನು ತೆಗೆದುಕೊಂಡು ಬಿಡಿ.

ಅಧ್ಯಕ್ಷರು : ಆಮೇಲೆ ಅದನ್ನು ತೆಗೆದುಕೊಳ್ಳೋಣ. ಈಗ ಡಿಮ್ಯಾಂಡ್ಸ್ ಮೇಲೆ ಚರ್ಚೆಯಾಗಲಿ.

ಶ್ರೀ ಬಿ .ಎಸ್.ಯಡಿಯೂರಪ್ಪ : ಅವರು ಮಾತನಾಡುವಾಗ ನಾನು ಹೇಗೆ ಮಧ್ಯೆ ಮಾತನಾಡುವುದಕ್ಕೆ ಆಗುತ್ತದೆ. ಬ್ರೇಕ್ ಮಾಡಿದ ಹಾಗೆ ಆಗುತ್ತದೆ.

ಅಧ್ಯಕ್ಷರು : ಏನೂ ಆಗಲ್ಲ ಬಿಡಿ ನೀವು ಮಾತನಾಡಿ.

ಶ್ರೀ ಶಿವಾನಂದ ಎಸ್. ಪಾಟೀಲ್ : ಭೀಮಾ ನದಿಗೆ ಸಂಬಂಧಪಟ್ಟ ಹಾಗೆ ನಾವು ಎಲ್ಲಾ ಕನೆಕ್ಟ್‌ಡ್ ಸಾರ್ ಅದಕ್ಕೆ ಸ್ವಲ್ಪ ನೀರಾವರಿ ಸಚಿವರನ್ನು ಕರೆಸಿರಿ. ಏಕೆಂದರೆ ಇದು ಅಜೆಂಡಾದಲ್ಲಿ ಬಂದಿದೆ.

ಅಧ್ಯಕ್ಷರು : ಆಯಿತು ಅದನ್ನು ತೆಗೆದುಕೊಂಡಿಲ್ಲ ನಿಮಗೆ ಅವಕಾಶ ಕೊಡುತ್ತೇನೆ ಕುಳಿತುಕೊಳ್ಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ : ಇವತ್ತು ನಿಮ್ಮ ಅಜೆಂಡಾದಲ್ಲಿ ಬಂದು ನೀರಾವರಿ ಸಚಿವರು ಇಲ್ಲವೆಂದರೆ ಹೇಗೆ? ಇಂಥ ಪ್ರಮುಖವಾದ ವಿಚಾರ, ಭೀಮಾ ನದಿ ಬತ್ತಿ ಹೋಗಿ ರೈತರೆಲ್ಲರೂ ಬೀದಿ ಪಾಲಾಗಿದ್ದಾರೆ.

ಅಧ್ಯಕ್ಷರು : ಬಹುಶ: ಅವರು ಅಲ್ಲಿರಬಹುದು ನಾನು ಅವರನ್ನು ಕರೆಸುತ್ತೇನೆ. ಕಾಗೇರಿಯವರು ನೀವು ಮಾತನಾಡಿ.

ಶ್ರೀ ಬಿ. ಎಸ್.ಯಡಿಯೂರಪ್ಪ : ನೀರಾವರಿ ಸಚಿವರು ಇಲ್ಲ ನಾನು ಬಹಳ ಪ್ರಾಮುಖ್ಯವಾದಂಥ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ.

ಡಾ: ಕೆ. ಅನ್ನದಾನಿ : ನನಗೆ ಒಂದು ಅವಕಾಶ ಕೊಡಿ ಸದನದಲ್ಲಿ ಹೇಳಬೇಕಾಗಿದೆ.

ಅಧ್ಯಕ್ಷರು: ಅವರು ಆಗಲೇ ಅದನ್ನು ಕ್ಲೋಸ್ ಮಾಡಿದ್ದಾರೆ ಬಿಡಿ. ಮಾನ್ಯ ಮಂತ್ರಿಗಳು ನಾಳೆ ಮೀಟಿಂಗ್ ಮಾಡಿ ಎಲ್ಲರನ್ನೂ ಕರೆದು ಇದರ ಬಗ್ಗೆ ರಿಸಾಲ್ವ್ ಮಾಡೋಣ ಎಂದು ಹೇಳಿದ್ದಾರೆ ಅಲ್ಲವೆ?.

ಡಾ: ಕೆ.ಅನ್ನದಾನಿ: ನಾನು ಕೂಡ 5 ವರ್ಷಗಳ ಕಾಲ ಅರೆಕಾಲಿಕ ಉಪನ್ಯಾಸಕನಾಗಿ ಸರ್ಕಾರಿ ಕಾಲೇಜುಗಳಲ್ಲಿ ಕೆಲಸ ಮಾಡಿದ್ದೇನೆ ಅದರ ನೋವನ್ನು ನಾನು ಇಲ್ಲಿ ಹೇಳಬೇಕಾಗಿದೆ. ದಯಮಾಡಿ ಅವಕಾಶ ಮಾಡಿಕೊಟ್ಟರೆ ನಾನು ಹೇಳಬಯಸುತ್ತೇನೆ.

ಅಧ್ಯಕ್ಷರು: ಇಲ್ಲಿ ಆಗಲ್ಲ ನಾಳೆ ಮೀಟಿಂಗ್ ಕರೆಯುತ್ತಾರೆ ಅಲ್ಲಿ ಹೇಳಿ. ದಯಮಾಡಿ ಕುಳಿತುಕೊಳ್ಳಿ.

ಡಾ: ಕೆ. ಅನ್ನದಾನಿ: ಸದನದಲ್ಲಿ ಹೇಳುವುದಕ್ಕೆ ಒಂದೇ ಒಂದು ನಿಮಿಷ ಅವಕಾಶ ಮಾಡಿಕೊಡಿ. ಇವತ್ತು ಎನ್.ಇ.ಟಿ. ಪಾಸ್ ಮಾಡಿದವರೆಲ್ಲಾ ಬುದ್ಧಿವಂತರು, ಎನ್.ಇ.ಟಿ. ಪಾಸ್ ಮಾಡದೇ ಇರುವವರು ದಡ್ಡರು ಎನ್ನುವ ಪ್ರಶ್ನೆ ಅಲ್ಲ. ಬಹಳ ವರ್ಷಗಳಿಂದ ಪಿಹೆಚ್‌ಡಿ ಮಾಡಿಕೊಂಡು, ಎಂಫಿಲ್ ಮಾಡಿಕೊಂಡು ಅವರದೇ ಆದ ವಿಷಯದಲ್ಲಿ ಎಕ್ಸ್‌ಪರ್ಟ್ಸ್ ಇದ್ದಾರೆ. ಬುದ್ಧಿವಂತರು ಇದ್ದಾರೆ, ಸಣ್ಣ ಪುಟ್ಟ ವ್ಯತ್ಯಾಸಗಳಿಂದ ಅವರು ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿರಬಹುದು. ಅದನ್ನೇ ಮಾನದಂಡವಾಗಿ ಬಳಸಿಕೊಂಡು 15–20 ವರ್ಷಗಳಿಂದ ಸೇವೆ ಸಲ್ಲಿಸತಕ್ಕಂಥ ಆ ಉಪನ್ಯಾಸಕರನ್ನು ನೀವು ತೆಗೆದು ಹಾಕಿದರೆ ಅವರ ಜೊತೆಗೆ ಅವರನ್ನು ನಂಬಿಕೊಂಡಿರುವ ಹೆಂಡತಿ, ಮಕ್ಕಳು, ತಂದೆ–ತಾಯಿ ಇವರ ಗತಿ ಏನಾಗಬೇಕು? ಇವರೆಲ್ಲರೂ ಬೀದಿಪಾಲಾಗತಕ್ಕಂಥ ಸಂಭವ ಇದೆ. ಆದುದರಿಂದ, ಎನ್ ಇ ಟಿ ಎನ್ನುವ ಪ್ರಶ್ನೆಯನ್ನು ಮುಂದಕ್ಕೆ ತಂದು ಅದನ್ನೇ ನೆಪಹೊಡ್ಡಿ ಅವರನ್ನು ಬೀದಿಪಾಲು ಮಾಡಬಾರದು ಎನ್ನತಕ್ಕಂಥದ್ದು ನನ್ನ ಮನವಿ, ಅವರನ್ನು ಹಾಗೆಯೇ ಮುಂದುವರಿಸಿಕೊಂಡು ಹೋಗಬೇಕೆನ್ನುವ ಮನವಿಯನ್ನು ಈ ಸದನದ ಮೂಲಕ ಹೇಳಲಿಕ್ಕೆ ನಾನು ಇಷ್ಟಪಡುತ್ತೇನೆ. ಇವತ್ತು ....

ಅಧ್ಯಕ್ಷರು : ಆಯಿತು ಆಯಿತು ಬಿಡಿ ಅನ್ನದಾನಿಯವರೇ ಆಯಿತು ಬಿಡಿ. ಮಂಡನೆ ಮಾಡಿದಿರಿ ದಯಮಾಡಿ ಕುಳಿತುಕೊಳ್ಳಿ.

ಡಾ॥ ಕೆ. ಅನ್ನದಾನಿ : ಇವತ್ತು ಪಿಹೆಚ್‌ಡಿ ಮಾಡಿದರೂ ಉದ್ಯೋಗ ಇಲ್ಲ. ಅದಕ್ಕಾಗಿ ತಾವು ಇವತ್ತು ಇದನ್ನೇ ಮಾನದಂಡವನ್ನಾಗಿ ಬಳಸಬಾರದು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾಳೆಯ ದಿವಸ ಇದನ್ನು 69 ಗೆ ಕನವರ್ಟ್ ಮಾಡಿ ತೆಗೆದುಕೊಳ್ಳುತ್ತೀರಾ?

ಅಧ್ಯಕ್ಷರು : ಯಾವುದನ್ನು ?

ಶ್ರೀ ಬಿ. ಎಸ್. ಯಡಿಯೂರಪ್ಪ : ಅವರೆಲ್ಲಾ ಆಸಕ್ತಿಯಿಂದ ಇದ್ದಾರೆ ತಾವು ಬೇಕಾದರೆ 69ಗೆ ಕನ್‌ವರ್ಟ್ ಮಾಡಿ ನಾಳೆ ತೆಗೆದುಕೊಳ್ಳಿ.

ಅಧ್ಯಕ್ಷರು : ಆಯಿತು ನಾಳೆ ತೆಗೆದುಕೊಳ್ಳೋಣ. ಆಯಿತು ಆಗಬಹುದು, ನೀವು ಮಾತನಾಡಿ, ತೋಟಗಾರಿಕೆ ಸಚಿವರು, ಕೃಷಿ ಸಚಿವರು ಇದ್ದಾರೆಯೇ, ಮಾನ್ಯ ರಾಮಲಿಂಗರೆಡ್ಡಿಯವರನ್ನು ಕರೆಸಿರಿ.

7. **ವಿತ್ತೀಯ ಕಾರ್ಯಕಲಾಪಗಳು :**

2005–06ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ :

ಬೇಡಿಕೆ ಸಂಖ್ಯೆ: 1, 23, 17 ಕೃಷಿ ತೋಟಗಾರಿಕೆ, ಕಾರ್ಮಿಕ, ಶಿಕ್ಷಣದ ಬಗ್ಗೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಅಧ್ಯಕ್ಷರೆ, ವಿತ್ತೀಯ ಕಾರ್ಯಕಲಾಪಗಳಲ್ಲಿ ಕೃಷಿ ತೋಟಗಾರಿಕೆ, ಕಾರ್ಮಿಕ, ಶಿಕ್ಷಣ, ಇಲಾಖೆಗಳ ಬೇಡಿಕೆಗಳಿಗೆ ಸಂಬಂಧಪಟ್ಟ ಚರ್ಚೆಯನ್ನು ಮುಂದುವರಿಸಲಿಕ್ಕೆ ಬಯಸುತ್ತಾ ನಾನು ಹಿಂದಿನವಾರ ಮಾತನಾಡುವಾಗ, ಕೃಷಿ ಇಲಾಖೆ ಇವತ್ತು ಹೇಗೆ ರಾಜ್ಯದ ರೈತರ ಸಂಕಷ್ಟಗಳಿಗೆ ಸ್ಪಂದಿಸುವುದಕ್ಕೆ ಸಂಪೂರ್ಣವಾಗಿ ವಿಫಲವಾಗಿದೆ. ರೈತರ ಯಾವುದೇ ಸಮಸ್ಯೆಗಳಿಗೂ ಸಹ ಅವಮಾನವೀಯ ಸ್ಪಂದನವೂ ಸಹ ಇಲಾಖೆಯಲ್ಲಿ ಇಲ್ಲದೇ ಇರುವುದರಿಂದ ಇವತ್ತು ರೈತರ ಪ್ರತಿಯೊಂದು ಹಂತದಲ್ಲಿ ಹೇಗೆ ತಮ್ಮ ಕಷ್ಟದ ಜೀವನವನ್ನು ಅವರು ಸ್ವತಂತ್ರ ನಂತರ ಭಾರತದಲ್ಲಿ ಇವತ್ತಿಗೂ ಅದನ್ನು ಮುಂದುವರಿಸುತ್ತಾರೆ ಎನ್ನುವ ವಿಷಯ ಕುರಿತಂತೆ ಅನೇಕ ವಿವರಗಳು ಚರ್ಚೆಯಾಗಿವೆ. ನಾವು ಮಳೆಯನ್ನು ಅವಲಂಬಿಸಿರುವಂಥ ರೈತರು. ಈ ವರ್ಷದ ಮಳೆ ಹೇಗೆ ಆಗುತ್ತದೆ ಎನ್ನುವುದನ್ನು ತಿಳಿದುಕೊಳ್ಳಬೇಕಾದರೆ ನಮ್ಮಲ್ಲಿ ಹವಾಮಾನ ಇಲಾಖೆ ಎಂದು ಇದೆ. ಅವರು ಇವತ್ತಿಗೂ ಸಹ ನಿಖರವಾಗಿ ಹೇಳುವುದಕ್ಕೆ ವಿಫಲರಾಗುತ್ತಿದ್ದಾರೆ. ನಮ್ಮದೇ ವಿಜ್ಞಾನಿಗಳು ಇದ್ದಾರೆ. ನಮ್ಮದೇ ಹವಾಮಾನ